# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1055 |
| ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ |
| ಉತ್ತರಿಸುವ ದಿನಾಂಕ | : | 24.02.2023. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ "ಬಿ" ದರ್ಜೆಯ ಹುದ್ದೆಗಳ ಹೆಸರು ಮತ್ತು ಎಷ್ಟು ಅಧಿಕಾರಿಗಳಿದ್ದಾರೆ: (ಈ ಹುದ್ದೆಯ ಕೆಲಸದ ಸ್ವರೂಪವನ್ನು ತಿಳಿಸುವುದು) ಹಾಗೂ ಟಿಡಿಓಗಳು ಕೇಂದ್ರ ಕಛೇರಿಯಲ್ಲಿ ಕೆಲಸ ಮಾಡುವ ಅವಶ್ಯಕತೆ ಕುರಿತು ಮಾಹಿತಿ ಒದಗಿಸುವುದು.</td><td>ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಮಂಜೂರಾದ 'ಬಿ' ದರ್ಜೆಯ ಹುದ್ದೆಗಳ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ವಿವರ ಈ ಕೆಳಕಂಡಂತಿದೆ:<br><table><tr><th>ಕ್ರ.ಸಂ</th><th>"ಬಿ" ದರ್ಜೆಯ ಹುದ್ದೆಗಳು</th><th>ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ</th></tr><tr><td>01</td><td>ಸಹಾಯಕ ಇಂಜಿನಿಯರ್</td><td>02 (ಹೊರಮೂಲ)</td></tr><tr><td>02</td><td>ತಾಲ್ಲೂಕು ಅಭಿವೃದ್ಧಿ ಅಧಿಕಾರಿ</td><td>52 (ಖಾಯಂ)</td></tr></table><br>ನಿಗಮದಲ್ಲಿ ಅಧಿಕಾರಿಗಳ ಕೊರತೆ ಇರುವುದರಿಂದಲೇ ಟಿಡಿಓಗಳು ಕೇಂದ್ರ ಕಛೇರಿಯಲ್ಲಿ ಕೆಲಸ ಮಾಡುವ ಅವಶ್ಯಕತೆ ಇರುತ್ತದೆ</td></tr>
<tr><td>ಆ)</td><td>ಸದರಿ ವೃಂದದವರಿಗೆ ಕರ್ತವ್ಯ ಮತ್ತು ಜವಾಬ್ದಾರಿ ನಿಗದಿಪಡಿಸಿ ದಿನಾಂಕ:30.09.2021 ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆಯೇ: ಹಾಗಿದ್ದಲ್ಲಿ ಸುತ್ತೋಲೆಯಲ್ಲಿ ಆದೇಶಿಸಿರುವಂತೆ ಎಲ್ಲಾ ಟಿಡಿಓಗಳು ತಾಲ್ಲೂಕುಗಳಲ್ಲಿ ಕೆಲಸದ ಪ್ರಗತಿಯ ಬಗ್ಗೆ ಯಾವ್ಯಾವ ವಿವರ ನೀಡುತ್ತಿದ್ದಾರೆ: (ಮಾಹಿತಿ ನೀಡುವುದು) ಮತ್ತು ಪ್ರತಿ ತಿಂಗಳೂ ದಿನಚರಿ ನಿರ್ವಹಣೆ ಮಾಡಿ ಮೇಲಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆಯಲಾಗುತ್ತಿದೆಯೇ: ಇದ್ದಲ್ಲಿ ಪ್ರತಿಗಳನ್ನು ಒದಗಿಸುವುದು: ಇಲ್ಲದಿದ್ದಲ್ಲಿ ಆದೇಶ ಉಲ್ಲಂಘಿಸಿರುವವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು:</td><td>ನಿಗಮದಗ್ರೂಪ್ 'ಬಿ' ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿ ನಿಗದಿಪಡಿಸಿ ದಿನಾಂಕ:30.09.2021 ರಂದು ಸುತ್ತೋಲೆ ಹೊರಡಿಸಲಾಗಿದೆ.<br><br>ಜಿಲ್ಲಾ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಟಿ.ಡಿ.ಓ.ಗಳು ನಿಗಮದ ಯೋಜನೆಗಳಡಿ ನಿಗಧಿಪಡಿಸಿರುವ ಗುರಿಗೆ ತಕ್ಕಂತೆ ಪ್ರಗತಿ ಸಾಧಿಸುವ ಬಗ್ಗೆ, ನಿರಂತರ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ. ಪ್ರವಾಸ ದಿನಚರಿ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸಲಾಗುತ್ತಿದ್ದು, ದಿನಚರಿ ಸಲ್ಲಿಸುವವರಿಗೆ ಮಾತ್ರ ಪ್ರಯಾಣ ಭತ್ಯೆ ನೀಡಲಾಗುವುದು. ಪ್ರವಾಸ ದಿನಚರಿಯ ವಿವರಗಳನ್ನು ಪಡೆಯಲು ಕ್ರಮವಹಿಸಲಾಗುವುದು.</td></tr>
</table>

**ಸಂಖ್ಯೆ: ಸಕಇ 87 ಎಸ್‌ಡಿಸಿ 2023**

**(ಕೋಟಾ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.